# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-37ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

ದಿನಾಂಕ: 13.05.2022 ರಂದು ಬೆಳಗ್ಗೆ 11.00 ಗಂಟೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಯಶವಂತಪುರ ಉಪ ವಿಭಾಗ, 2ನೇ ಮಹಡಿ, ಬಿಬಿಎಂಪಿ ವಾಣಿಜ್ಯ ಸಂಕೀರ್ಣ (ಆರ್‌ಟಿಓ ಕಾಂಪ್ಲೆಕ್ಸ್), ಯಶವಂತಪುರ ಇಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು

ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರು:-

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಹುದ್ದೆ | ಪದನಾಮ | ಹಾಜರಾತಿ |
|---|---|---|---|---|
| 1 | ಶ್ರೀ ಎನ್. ಜಿ. ಉಮೇಶ್ | ಸ.ಕಾ.ನಿ.ಅ.. | ಅಧ್ಯಕ್ಷರು/ ವಾರ್ಡ್ ನೋಡಲ್ ಅಧಿಕಾರಿ | ಹಾಜರಿದ್ದರು |
| 2 | ಶ್ರೀ ಎಂ. ವಿಘ್ನೇಶ್ | ಸ.ಕಾ.ನಿ.ಅ. | | ಹಾಜರಿದ್ದರು |
| 3 | ಹೇಮ ಎಸ್.ಟಿ. | ಸಹಾಯಕ ಅಭಿಯಂತರರು | ಸದಸ್ಯರು | ಹಾಜರಿದ್ದರು |
| 4 | ಡಾ|| ಅನುಷಾ | ಕೋವಿಡ್ ವೈದ್ಯಾಧಿಕಾರಿಗಳು | ಸದಸ್ಯರು | ಹಾಜರಿದ್ದರು |
| 5 | ಬಿ. ಜಗದೀಶ್ | ಡಿ.ಆರ್.ಎಫ್. | ಸದಸ್ಯರು | ಹಾಜರಿದ್ದರು |
| 6 | ಪ್ರಕಾಶ್ | ಮೌಲ್ಯಮಾಪಕರು. | ಸದಸ್ಯರು | ಹಾಜರಿದ್ದರು |
| 7 | ರಮೇಶ್ | ಹಿರಿಯ ಆರೋಗ್ಯ ಪರಿವೀಕ್ಷಕರು | ಸದಸ್ಯರು | ಹಾಜರಿದ್ದರು |
| 8 | ಕೃಷ್ಣಮೂರ್ತಿ | ಪಿ.ಎಸ್.ಐ. ಯಶವಂತಪುರ ಪೊಲೀಸ್ ಠಾಣೆ | ಸದಸ್ಯರು | ಹಾಜರಿದ್ದರು |
| 9 | ಮಂಜುನಾಥ್ | ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆ ಪರವಾಗಿ | | ಹಾಜರಿದ್ದರು |
| 10 | ಮುರಳಿ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |
| 11 | ಜಾನ್ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |
| 12 | ರಾಜು ಆರ್. | ಮಾರ್ಷಲ್ | ಸದಸ್ಯರು | ಹಾಜರಿದ್ದರು |

ವಾರ್ಡ್-37ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ಮಾನ್ಯ ಅಧ್ಯಕ್ಷರು, ಸಭೆಯ ಸದಸ್ಯರುಗಳನ್ನು ಪರಸ್ಪರ ಪರಿಚಯ ಮಾಡಿಸಿ, ಮಾರ್ಗಸೂಚಿಯಂತೆ, ಈ ಕೆಳಗಿನ ವಿಷಯಗಳನ್ನು ಸಭೆಯ ಮುಂದಿಟ್ಟು ವಾರ್ಡ್ ಸಮಿತಿ ಸಭೆಯು ನಿರ್ವಹಿಸಬೇಕಾದ ಅಂಶಗಳನ್ನು ತಿಳಿಸಿ, ಅನುಸರಿಸಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**1) ಆರೋಗ್ಯ :**

ಕೋವಿಡ್ ಪ್ರಕರಣಗಳು ವಾರ್ಡ್ ವ್ಯಾಪ್ತಿಯಲ್ಲಿ ಇಲ್ಲದೇ ಇರುವ ಕಾರಣ ಆದಾಗ್ಯೂ ಟೆಸ್ಟಿಂಗ್ ನಡೆಸಲಾಗಿದ್ದು, ಯಾವುದೇ ಪ್ರಕರಣಗಳು ಪತ್ತೆಯಾಗಿರುವುದಿಲ್ಲ. ಡೆಂಗ್ಯೂ, ಮಲೇರಿಯಾ ಪ್ರಕರಣಗಳು ಹೆಚ್ಚಾಗುತ್ತಿದ್ದು, ಹಾಗೂ ಟೊಮ್ಯಾಟೋ ಫ್ಲೂ ಬೇರೆ ರಾಜ್ಯದಲ್ಲಿ ಕಂಡುಬರುತ್ತಿರುವುದರಿಂದ ಜಾಗೃತಿ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದಾಗಿ ಡಾ॥ ಅನುಷಾರವರು ತಿಳಿಸಿದ್ದಾರೆ.

ದಿನಾಂಕ;20.05.2022 ರಂದು ಕ್ಯಾಂಪ್ ಆಯೋಜಿಸಿ ಬ್ರೆಸ್ಟ್ ಕ್ಯಾನ್ಸರ್ ಬಗ್ಗೆ ಹಾಗೂ ಕಾಯಕಲ್ಪ ಕ್ಯಾಂಪ್ ಆಯೋಜಿಸಿ, ಜನರಲ್ಲಿ ಸ್ವಚ್ಛತೆಯ ಜಾಗೃತಿಯನ್ನು ಮೂಡಿಸುತ್ತಿರುವುದಾಗಿ ಡಾಕ್ಟರ್ ತಿಳಿಸಿದ್ದಾರೆ.

ಸುಣ್ಣದಗೂಡು ಕ್ಯಾಂಪ್‌ನಲ್ಲಿ 3ನೇ ರೌಂಡ್ ನಡೆಸಿ, ಅದರಲ್ಲಿ 0-2 ವರ್ಷದ ಮಕ್ಕಳು ಹಾಗೂ ಗರ್ಭಿಣಿ ಮಹಿಳೆಯರಿಗೆ ಅಗತ್ಯವಾದ ಮಾಹಿತಿಯನ್ನು ಒದಗಿಸುವ ಕಾರ್ಯಕ್ರಮವನ್ನು ಮಾಡಲಾಯಿತು.

**2) ಬೀದಿ ವ್ಯಾಪಾರ :**

ಯಶವಂತಪುರ ಬಾಂಬೆ ಡಾಯಿಂಗ್ ರಸ್ತೆ ಬದಿಯಲ್ಲಿ ಪ್ಯಾಸೆಂಜರ್ ಆಟೋಗಳನ್ನು ಬಳಕೆ ಮಾಡಿ ವ್ಯಾಪಾರ ಮಾಡುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ತಿಳಿಲಾಗಿದೆ. ಆದಷ್ಟು ಬೇಗ ತೆರವುಗೊಳಸಬೇಕೆಂದು ನೋಡಲ್ ಅಧಿಕಾರಿಗಳು ಟ್ರಾಫಿಕ್ ಪೋಲೀಸರಿಗೆ ತಿಳಿಸಿದರು.

**3) ಕಂದಾಯ ಇಲಾಖೆ :**

ಟ್ಯಾಕ್ಸ್ ಸಂಬಂಧಪಟ್ಟ ಮಾಹಿತಿಯನ್ನು ನೀಡಬೇಕೆಂದು ನೋಡಲ್ ಅಧಿಕಾರಿಗಳು ಕಂದಾಯ ಇಲಾಖೆಯವರಿಗೆ ತಿಳಿಸಿದ್ದಾರೆ. ಅದರಂತೆ, ಸಂಬಂಧಪಟ್ಟ ವರದಿಯನ್ನು ಕೂಡಲೇ ಸಲ್ಲಿಸಲಾಗುವುದು ಎಂದು ಸಭೆಗೆ ಹಾಜರಾಗಿದ್ದ ಕಂದಾಯ ಮೌಲ್ಯಮಾಪಕರು ತಿಳಿಸಿರುತ್ತಾರೆ.

**4) ಬಿಡಬ್ಲ್ಯೂಎಸ್‌ಎಸ್‌ಬಿ :**

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಮಾಡೆಲ್ ಕಾಲೋನಿ 2ನೇ ಅಡ್ಡರಸ್ತೆಯಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿಯ ಖಾಲಿ ಜಾಗದಲ್ಲಿ ಯಥೇಚ್ಛವಾಗಿ ಗಿಡಗಳು ಬೆಳೆದಿರುವುದರಿಂದ ಹಾವು, ಚೇಳು, ಇಲಿ, ಹೆಗ್ಗಣಗಳು ಹೆಚ್ಚಾಗಿದ್ದು, ಅವುಗಳು ಅಕ್ಕಪಕ್ಕದಲ್ಲಿರುವ ಮನೆಗಳು ಹಾಗೂ ವಾರ್ಡ್ ಕಛೇರಿಗಳಿಗೆ ನುಗ್ಗುತ್ತಿರುವುದು ಕಂಡುಬಂದು ಸಾರ್ವಜನಿಕರು ದೂರನ್ನು ನೀಡಿರುತ್ತಾರೆ. ಅದರಂತೆ, ಬಿಡಬ್ಲ್ಯೂಎಸ್‌ಎಸ್‌ಬಿಯವರು ತೆರವುಗೊಳಿಸಿದ್ದಾರೆ. ಬಿಡಬ್ಲ್ಯೂಎಸ್‌ಎಸ್‌ಬಿಯವರು ತಮ್ಮ ಯಾವುದೇ ಕೆಲಸ ಮುಗಿದ ನಂತರ ಸಿಲ್ಟ್ ತೆರವುಗೊಳಿಸಬೇಕೆಂದು ನೋಡಲ್ ಅಧಿಕಾರಿ ತಿಳಿಸಿದ್ದಾರೆ.

**5) ಅರಣ್ಯ ಇಲಾಖೆ:**

ಮಳೆಗಾಲ ಪ್ರಾರಂಭವಾಗುತ್ತಿರುವುದರಿಂದ ವಾರ್ಡ್‌ನಲ್ಲಿ ಮರಗಳ ತೊಂದರೆಯಾಗುತ್ತಿರುವ ಸ್ಥಳದಲ್ಲಿ ಗಮನವಹಿಸಿ. ಕಾರ್ಯನಿರ್ವಹಿಸಬೇಕೆಂದು ನೋಡಲ್ ಅಧಿಕಾರಿಗಳು ಹಾಜರಾಗಿದ್ದ ಡಿಆರ್‌ಎಫ್ ರವರಿಗೆ ತಿಳಿಸಿದ್ದಾರೆ.

**6) ಪೊಲೀಸ್ ಇಲಾಖೆ:**

ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಗಾಡಿಗಳನ್ನು ತೆರವುಗೊಳಿಸಬೇಕೆಂದು ನೋಡಲ್ ಅಧಿಕಾರಿಗಳು ತಿಳಿಸಿದ್ದಾರೆ. ಅದರಂತೆ, ಕೆಲವು ಗಾಡಿಗಳನ್ನು ಕೆಇಬಿ ಆಫೀಸಿನಲ್ಲಿ ಹಾಕಲಾಗಿದೆ ಎಂದು ಹಾಜರಾಗಿದ್ದ ಪಿ.ಎಸ್.ಐ. ರವರು ತಿಳಿಸಿದ್ದಾರೆ. ಹಾಗೂ ಬಾಂಬೆ ಡಾಯಿಂಗ್ ಪ್ರದೇಶದಲ್ಲಿ 10 ಗಾಡಿಗಳು ಪತ್ತೆಯಾಗಿದ್ದು, ಆದಷ್ಟು ಬೇಗ ತೆರವುಗೊಳಿಸಬೇಕೆಂದು ಹಾಗೂ ನೋ ಪಾರ್ಕಿಂಗ್ ಬೋರ್ಡ್‌ನ್ನು ರಿಮೂವು ಮಾಡಿರುವುದನ್ನು ಮತ್ತೆ ಹಾಕಿಸಬೇಕೆಂದು ನೋಡಲ್ ಅಧಿಕಾರಿಗಳು ತಿಳಿಸಿದ್ದಾರೆ.

**7) ಮಾರ್ಷಲ್:-**

ಕೋವಿಡ್ ಹೆಚ್ಚಾಗುತ್ತಿರುವ ಕಾರಣ ಮಾರ್ಷಲ್‌ಗಳು ಮಾಸ್ಕ್ ಹಾಕುವಂತೆ ಜನರಲ್ಲಿ ಜಾಗೃತಿ ಮೂಡಿಸಬೇಕೆಂದು ನೋಡಲ್ ಅಧಿಕಾರಿಗಳು ತಿಳಿಸಿಸದ್ದಾರೆ.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

S.T

ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:37

**(ಎನ್. ಜಿ. ಉಮೇಶ್)**
ಸ.ಕಾ.ನಿ.ಅ. ಹಾಗೂ
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:37